**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆ: 1274/2018**

**ಪ್ರಾಸಾಃ 12 ಚಾಸಾಃ 26**

| | | |
|---|---|---|
| ಸಾಕ್ಷಿಯ ಹೆಸರು | : | ಉಮೇಶ್ ನಾಯ್ಕ್ |
| ತಂದೆಯ ಹೆಸರು | : | ಈಶ್ವರ್ ನಾಯ್ಕ್ |
| ವಯಸ್ಸು | : | 59 **ವರ್ಷ** |
| ವೃತ್ತಿ | : | ಪೊಲೀಸ್ ಉಪಾಧೀಕ್ಷಕರು, ಸೈಬರ್ ಕ್ರೈಂ ಪೊಲೀಸ್ ಠಾಣೆ, ಚಿತ್ರದುರ್ಗ |
| ವಾಸಸ್ಥಳ | : | ಚಿತ್ರದುರ್ಗ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 26.12.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ:-09.08.2017 ರಿಂದ ದಿ:-18.01.2019 ರವರೆಗೆ ಪೊಲೀಸ್ ಉಪಾಧೀಕ್ಷಕನಾಗಿ ಬಳ್ಳಾರಿ ನಗರ ಉಪವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:-06.01.2018 ರಂದು ಎಸ್.ಪಿ. ಬಳ್ಳಾರಿ ರವರು ಈ ಪ್ರಕರಣದ ತನಿಖೆಗಾಗಿ ನೀಡಿದ ಆದೇಶವನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿ ಸದರಿ ಅನುಮತಿ ಪತ್ರ ನೋಡಿ ಗುರ್ತಿಸಿದ್ದು ಅದನ್ನು ನಿಪಿ-9 ಎಂದು ಗುರ್ತಿಸಲಾಯಿತು.

ಅದೇ ದಿವಸ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾ.ಸಾ-25 ನಾಗರಾಜ ಆರ್ ಪಿ.ಐ ರವರಿಂದ ಪಡೆದಿರುತ್ತೇನೆ. ಕಡತವನ್ನು ಪರಿಶೀಲಿಸಿದ್ದು, ತನಿಖೆ ಕ್ರಮಬದ್ಧವಾಗಿರುತ್ತದೆ.

ದಿನಾಂಕ:09.01.2018 ರಂದು ಕೃತ್ಯ ನಡೆದ ಸ್ಥಳ ಬಳ್ಳಾರಿ ಗಾಂಧಿನಗರ ಠಾಣಾ ಸರಹದ್ದಿನ ಬಳ್ಳಾರಿ ಪೊಲೀಸ್ ಅಧೀಕ್ಷಕರವರ ಕಛೇರಿ ಆವರಣದಲ್ಲಿರುವ ಸಿಇಎನ್ ಸಿ ಪೊಲೀಸ್ ಠಾಣೆಯ ಒಳಗಡೆ ಪಿರ್ಯಾದುದಾರರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-22, ಅನಿಲ್ ಕುಮಾರ ಮತ್ತು ಚಾಸಾ-23 ಶ್ರೀನಿವಾಸ್ ಎ ರವರ ಸಮಕ್ಷಮ ನಿಪಿ-3 ರಂತೆ ಸಂಜೆ 06.30 ಗಂಟೆಯಿಂದ ರಾತ್ರಿ 07.30 ಗಂಟೆಯವರೆಗೆ ಠಾಣೆಯ

ವಿದ್ಯುತ್ ದೀಪದ ಬೆಳಕಿನಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಅದಕ್ಕೆ ಸಾಕ್ಷಿ ಹಾಗು ಪಂಚರ ಸಹಿಯನ್ನು ಪಡೆದಿರುತ್ತೇನೆ. ನಿಪಿ-3 ರಲ್ಲಿ ಸಾಕ್ಷಿದಾರರ ಸಹಿಯನ್ನು ನಿಪಿ-3(ಡಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲದಲ್ಲಿ ಸ್ಥಳದ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕಾಶೆಯನ್ನು ನಿಪಿ-10 ಎಂದು ಗುರುತಿಸಲಾಯಿತು ಹಾಗು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ನಿಪಿ-5 ಮತ್ತು 6 ರಂತೆ ಫೋಟೋ ತೆಗೆದಿರುತ್ತೇನೆ. ಪಂಚನಾಮೆ ಕಾಲದಲ್ಲಿ ಪಿರ್ಯಾದುದಾರರು ಹಾಜರುಪಡಿಸಿದ ದಿನಾಂಕ:17.11.2017 ರಂದು ಸಿಇಎನ್ ಸಿ ಪೊಲೀಸ್ ಠಾಣೆಯಲ್ಲಿ ಎಸೆದು ಹೋದ ಜಾಗೃತಿಕರಣ ಪಾಕ್ಷಿಕ ಪತ್ರಿಕೆ ಸಂಪುಟ 03 ಸಂಚಿಕೆ 58 16 ನೇ ನವೆಂಬರ್ 2017-30 ನೇ ನವೆಂಬರ್ 2017 ರ 20 ಪುಟಗಳಿರುವ ಪತ್ರಿಕೆಯನ್ನು ಹಾಜರುಪಡಿಸಿದ್ದು ತನಿಖೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಪತ್ರಿಕೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ.

ಅದೇ ದಿವಸ ಠಾಣೆಗೆ ಹೋಗಿ ಅಮಾನತ್ತು ಪಡಿಸಿಕೊಂಡ ಜಾಗೃತಿಕಿರಣ ಪತ್ರಿಕೆಯನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 03/2018 ರಲ್ಲಿ ಅಳವಡಿಸಿಕೊಂಡಿರುತ್ತೇನೆ.

ಅದೇ ದಿನ ಪಿರ್ಯಾದುದಾರರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ:20.01.2018 ರಂದು ಪಿರ್ಯಾದುದಾರರಿಗೆ ಪ್ರಕರಣದ ಸಾಕ್ಷಿದಾರರ ವಿವರವಾದ ವಿಳಾಸ ಒದಗಿಸಿ ಸಾಕ್ಷಿಗಳನ್ನು ತನಿಖೆಗಾಗಿ ಹಾಜರುಪಡಿಸಲು ಜ್ಞಾಪನ ನೀಡಿರುತ್ತೇನೆ.

ದಿನಾಂಕ:22.01.2018 ರಂದು ಪಿರ್ಯಾದುದಾರರ ಮೊಬೈಲ್ ಸಂಖ್ಯೆ 9448262805 ಗೆ ಆರೋಪಿತ ಮೊಬೈಲ್ ಸಂಖ್ಯೆ 8904000080 ರಿಂದ ದಿನಾಂಕ:01.08.2017 ರಿಂದ 10.08.2017 ರವರೆಗಿನ ಕರೆಗಳ ವಿವರಗಳು ಹಾಗೂ ಮೊಬೈಲ್ ನಂಬರ್ ನ ಬಳಕೆದಾರರ ಹೆಸರು ವಿಳಾಸ ತರಿಸಿಕೊಡಲು ಸಂಬಂಧಪಟ್ಟವರಿಗೆ ಎಸ್ ಪಿ ಬಳ್ಳಾರಿರವರ ಮೂಲಕ ಮನವಿ ಸಲ್ಲಿಸಿಕೊಂಡಿರುತ್ತೇನೆ.

ಅದೇ ದಿನ ಜಾಗೃತಿಕಿರಣ ಕನ್ನಡ ಪಾಕ್ಷಿಕ ಪತ್ರಿಕೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾಗಿದೆಯೇ ಎಂಬ ಬಗ್ಗೆ ಮಾಹಿತಿ ನೀಡಲು ಡಿಸಿ ರವರಿಗೆ ಮನವಿ ಸಲ್ಲಿಸಿಕೊಂಡಿರುತ್ತೇನೆ.

ದಿನಾಂಕ:27.01.2018 ರಂದು ಚಾಸಾ-03 ಶ್ರೀ ರಘುನಾಥ್ ಸಿ, ಚಾಸಾ-06 ಮಲ್ಲೇಶ್ ಕೆ ಎಮ್, ಚಾಸಾ-07 ನವೀನ್ ಎಸ್ ಮತ್ತು ಚಾಸಾ-08 ರಘು @ ಸುರೇಶ್ ಕುಮಾರ್ ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಜಾಗೃತಿ ಕಿರಣ ಕನ್ನಡ ಪತ್ರಿಕೆಯಲ್ಲಿ ನಮೂದಿಸಿದ ಮುದ್ರಾಣಾಲಯದ ವಿಳಾಸ ಪತ್ತೆಗಾಗಿ ಗಾಂಧಿನಗರ ಠಾಣೆಯ ಎಎಸ್ಐ ತ್ಯಾಗರಾಜ್ ರವರನ್ನು ನೇಮಿಸಿ ಕಳುಹಿಸಿರುತ್ತೇನೆ.

ದಿನಾಂಕ:28.01.2018 ರಂದು ಪಿರ್ಯಾದುದಾರರು ದಿನಾಂಕ:04.08.2017 ರಂದು ಕರ್ತವ್ಯದಲ್ಲಿದ್ದಾಗ ತಮ್ಮ ಮೇಲಾಧಿಕಾರಿಗಳೊಂದಿಗೆ ದಾಳಿ ನಡೆಸಿ ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ-207/2017 ರ ದಾಖಲೆಗಳನ್ನು ಧೃಡೀಕರಿಸಿ ನೀಡಲು ಪಿಐ ಬ್ರೂಸ್ ಪೇಟೆ ರವರಿಗೆ ಜ್ಞಾಪನ ನೀಡಿರುತ್ತೇನೆ.

ಅದೇ ದಿನ ಪಿರ್ಯಾದುದಾರರು ದಿನಾಂಕ:09.11.2017 ರಂದು ತಮ್ಮ ಮೇಲಾಧಿಕಾರಿಗಳೊಂದಿಗೆ ಅಕ್ರಮ ಮರಳು ದಾಳಿಯಲ್ಲಿ ಭಾಗವಹಿಸಿ ಕೌಲ್ ಬಜಾರ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ಪ್ರಕರಣ ಸಂಖ್ಯೆ -341/2017 ರ ದಾಖಲೆಗಳನ್ನು ಧೃಢೀಕರಿಸಿ ನೀಡಲು ಪಿಐ ಕೌಲ್ ಬಜಾರ್ ಪೊಲೀಸ್ ಠಾಣೆರವರಿಗೆ ಜ್ಞಾಪನ ನೀಡಿರುತ್ತೇನೆ.

ದಿನಾಂಕ:31.01.2018 ರಂದು ಎಎಸ್ಐ ತ್ಯಾಗರಾಜ್ ರವರು ಜಾಗೃತಿಕಿರಣ ಪತ್ರಿಕೆಯಲ್ಲಿ ನಮೂದಿಸಿದ ವಿಳಾಸಕ್ಕೆ ಭೇಟಿ ನೀಡಿ ಪರಿಶೀಲಿಸಿ ಆ ವಿಳಾಸದಲ್ಲಿ ಯಾವುದೇ ಮುದ್ರಾಣಾಲಯ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

ದಿನಾಂಕ:01.02.2018 ರಂದು ಆರೋಪಿ ಯಾಲ್ವಿ ವಲೀಭಾಷ ರವರು ನ್ಯಾಯಾಲಯದಿಂದ ಜಾಮೀನು ಆದೇಶ ಪಡೆದು ಹಾಜರಾಗಿದ್ದು ಆರೋಪಿತರನ್ನು ದಸ್ತಗಿರಿ ಮಾಡಿ ಸೂಕ್ತ ಕಾನೂನು ಕ್ರಮಗಳನ್ನು ಪಾಲನೆ ಮಾಡಿರುತ್ತೇನೆ, ವಿಚಾರಣೆ ಮಾಡಿ ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ.

ಅದೇ ದಿನ ಆರೋಪಿಗೆ ಜಾಗೃತಿಕಿರಣ ಕನ್ನಡ ಪಾಕ್ಷಿಕ ಪತ್ರಿಕೆಯನ್ನು ನೋಂದಣಿ ಮಾಡಿಸಿದ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ನೋಟಿಸ್ ನೀಡಿರುತ್ತೇನೆ.

ಅದೇ ದಿನ ಸಾಕ್ಷಿದಾರರಾದ ಚಾಸಾ-02 ಡಾ.ವಿನಾಯಕ್ ಪ್ರಸನ್ನ ಮತ್ತು ಚಾಸಾ-09 ರವಿ ರವರ ಹೇಳಿಕೆ ಪಡೆದಿರುತ್ತೇನೆ.

ಅದೇ ದಿನ ಎಸ್ ಪಿ ಕಛೇರಿಯಿಂದ ಬಂದ ಆರೋಪಿ ಮತ್ತು ಪಿರ್ಯಾದುದಾರರ ನಡುವಿನ ಮೊಬೈಲ್ ಮಾತುಕತೆ ಸಂಬಂಧ ಪಡೆದ ಸಿಡಿಆರ್ ಮಾಹಿತಿಯನ್ನು ಪರೀಶೀಲಿಸಲಾಗಿ ದಿನಾಂಕ:04.08.2017 ರಂದು ಆರೋಪಿಯು ತನ್ನ ಮೊಬೈಲ್ ಸಂಖ್ಯೆ 8904000080 ದಿಂದ ಪಿರ್ಯಾದುದಾರರ ಮೊಬೈಲ್ ಸಂಖ್ಯೆ 9448262805

ಗೆ ರಾತ್ರಿ 20.55.04 ರ ವೇಳೆಗೆ ಕರೆಮಾಡಿ 87 ಸೆಕೆಂಡ್ ಮಾತನಾಡಿರುವುದು ಕಂಡುಬಂದಿರುತ್ತೆ. ಸದರಿ ಸಿಡಿ ಆರ್ ನ್ನು ನಿಪಿ-11 ಎಂದು ಗುರುತಿಸಲಾಯಿತು.

ದಿನಾಂಕಃ 02.02.2018 ರಂದು ಚಾಸಾ-04 ಕಟ್ಟೆ ಬಸಪ್ಪ ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ:08.07.2018 ರಂದು ಬ್ರೂಸ್ ಪೇಟೆ ಮೊ ನಂ:207/2017 ಹಾಗೂ ಕೌಲ್ ಬಜಾರ್ ಠಾಣೆ ಮೊ ನಂ:341/2017 ರ ಧೃಡೀಕೃತ ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-05 ತಿಮ್ಮಪ್ಪ ಹಾಗೂ ಚಾಸಾ-10 ಮಲ್ಲಿಕಾರ್ಜುನರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ:05.03.2018 ರಂದು ಚಾಸಾ-11 ಹಸನ್ ಸಾಬ್ ಪಿಐ, ಚಾಸಾ-12 ನವಾಬ್ ಸಿಹೆಚ್ ಸಿ-297 ಮತ್ತು ಚಾಸಾ-13 ಉಮಾಮಹೇಶ್ವರ್ ಸಿಪಿಸಿ-929 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ:08.03.2018 ರಂದು ಬಳ್ಳಾರಿ ತಹಶೀಲ್ದಾರ್ ರವರಿಂದ ಪಿರ್ಯಾದಿ ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಹಾಗೂ ಪರೀಶಿಲಿಸಲಾಗಿ ಪಿರ್ಯಾದಿರವರು ಆದಿ ದ್ರಾವಿಡ ಪರಿಶಿಷ್ಟ ಜಾತಿಗೆ ಹಾಗೂ ಆರೋಪಿತರು ಮುಸ್ಲಿಂ 2 ಬಿ ವರ್ಗಕ್ಕೆ ಸೇರಿರುತ್ತಾರೆ. ಸದರಿ ಜಾತಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಗಿದೆ.

ದಿನಾಂ:21.03.2018 ರಂದು ಚುನಾವಣ ಪ್ರಯುಕ್ತ ನನಗೆ ದಾವಣಗೆರೆ ರಾಜ್ಯ ಗುಪ್ತ ವಾರ್ತೆ ವಿಭಾಗಕ್ಕೆ ವರ್ಗಾವಣೆಯಾಗಿರುತ್ತದೆ. ಆದ್ದರಿಂದ ಕಡತವನ್ನು ಮಲ್ಲೇಶಪ್ಪ ಮಲ್ಲಾಪುರ ಡಿವೈಎಸ್ ಪಿ ರವರಿಗೆ ವಹಿಸಿರುತ್ತೇನೆ.

ದಿನಾಂಕ:09.07.2018 ರಂದು ನಾನು ದಾವಣಗೆರೆ ರಾಜ್ಯ ಗುಪ್ತ ವಾರ್ತೆ ವಿಭಾಗದಿಂದ ವಾಪಾಸ್ ಬಂದು ಕಡತವನ್ನು ತನಿಖೆಗೆ ಪಡೆದಿರುತ್ತೇನೆ.ಕಡತವನ್ನು ಪರಿಶೀಲಿಸಲಾಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ರವರು ಆರೋಪಿತನು ಹಾಜರುಪಡಿಸಿದ ಜಾಗೃತಿಕಿರಣ ಕನ್ನಡ ಪಾಕ್ಷಿಕ ಪತ್ರಿಕೆಗೆ ಸಂಬಂಧಿಸಿದ ಸರ್ಟಿಫೀಕೇಟ್ ಆಫ್ ರಿಜಿಸ್ಟ್ರೇಶನ್ ನಕಲು ಪ್ರತಿಯನ್ನು ಪಡೆದು ಕಡತದಲ್ಲಿ ಅಳವಡಿಸಿರುತ್ತಾರೆ.

ದಿನಾಂಕ:13.07.2018 ರಂದು ಬಳ್ಳಾರಿ ನಗರ ಪಾಲಿಕೆಯಿಂದ ಆರೋಪಿ ವಲೀ ಭಾಷಾ ರವರು ಪ್ರಿಂಟಿಂಗ್ ಪ್ರೆಸ್ ನಡೆಸಲು ದಿನಾಂಕ:01.06.2018 ರಂದು ಪರವಾನಗಿ ಪಡೆದ ದಾಖಲಾತಿಯನ್ನು ನಗರ ಸಭೆಯಿಂದ ಪಡೆದುಕೊಂಡಿರುತ್ತೇನೆ. ಪರವಾನಗಿ ಪರಿಶೀಲಿಸಲಾಗಿ ಪಿರ್ಯಾದುದಾರರು ಪ್ರಕರಣ ದಾಖಲಾದ ನಂತರ ದಿನಾಂಕ:21.03.2018 ರಂದು ನಗರ ಪಾಲಿಕೆಗೆ ಪ್ರಿಂಟಿಂಗ್ ಪ್ರೆಸ್ ಲೈಸೆನ್ಸ್ ಗೆ ಅರ್ಜಿ ಸಲ್ಲಿಸಿ ನಂತರ ಪಡೆದುಕೊಂಡಿರುವುದು ಕಂಡುಬಂದಿರುತ್ತದೆ. ಮಹಾನಗರ ಪಾಲಿಕೆಯವರು ನೀಡಿದ ಪತ್ರ ಹಾಗೂ ಲೈಸೆನ್ಸ್ ಅರ್ಜಿ ಹಾಗೂ ಲೈಸೆನ್ಸ್ ನ ಕಾಪಿಗಳನ್ನು ಒಟ್ಟಾಗಿ ನಿಪಿ-14 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

ದಿನಾಂಕ:19.07.2018 ರಂದು ಬಿಎಸ್ ಎನ್ ಎಲ್ ಸರ್ವೀಸ್ ಪ್ರೊವೈಡರ್ ಡಿಜಿ ಎಂ ರವರಿಂದ 65(ಬಿ) ಪ್ರಮಾಣ ಪತ್ರವನ್ನು ಹಾಗೂ ಪಿರ್ಯಾದುದಾರರ ಮೊಬೈಲ್ 9448262605 ಸಂಖ್ಯೆಯ ಸಿಎಎಫ್ ನೀಡಿರುತ್ತಾರೆ. ಮತ್ತು ಬಿಎಸ್ ಎನ್ ಎಲ್ ನೀಡಿರುವ Sony CD R700MB ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಿ ಎ ಎಫ್ ಫಾರ್ಮ್ ನ್ನು ನಿಪಿ-15 ಎಂದು, ಸಿಡಿಯನ್ನು ನಿಪಿ-16 ಎಂದು, ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಪ್ರಮಾಣ ಪತ್ರವನ್ನು ನಿಪಿ-17 ಎಂದು ಗುರುತಿಸಲಾಯಿತು. ನಿಪಿ-17 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು.

ಅದೇ ದಿನ ಏರ್ಟೆಲ್ ಕಂಪನಿಯವರು ನೀಡಿದ ಆರೋಪಿ ವಲೀ ಬಾಷಾರವರಿಗೆ ಸೇರಿದ ಮೊಬೈಲ್ ಸಂಖ್ಯೆ 8904000080 ನೇ ನಂಬರ್ ಗೆ ಸಂಬಂಧಿಸಿದಂತೆ ಸಿಡಿಆರ್, ಸಿಎಎಫ್ ಹಾಗೂ 65(ಬಿ) ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಿ ಎ ಎಫ್ ನ್ನು ನಿಪಿ-18 ಎಂದು ಗುರುತಿಸಲಾಯಿತು. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಪ್ರಮಾಣ ಪತ್ರವನ್ನು ನಿಪಿ-19 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ದಿನಾಂಕ:13.08.2018 ರಂದು ಬ್ರೂಸ್ ಪೇಟೆ ಮೊನಂ:207/2017 ಗಾಂಜಾ ಕೇಸಿನ ಎಫ್ಐಆರ್ ನಕಲು ಪ್ರತಿ, ಹಾಗೂ ಕೌಲ್ ಬಜಾರ್ ಠಾಣೆಯ ಮೊನಂ:341/2017 ನ ಎಫ್ಐಆರ್ ನಕಲು ಪ್ರತಿ ಮತ್ತು ಕೌಲ್ ಬಜಾರ್ ಪಿಎಸ್ ನ ಯುಡಿಆರ್:77/2017 ರ ಪ್ರತಿ ಮತ್ತು ಮೃತ ನಿಸಾರ್ ಅಹಮ್ಮದ್ ರವರ ಶವ ಪರೀಕ್ಷಾ ವರದಿ ಪ್ರತಿಗಳನ್ನು ಹಾಗೂ ಬಳ್ಳಾರಿ ಗ್ರಾಮಾಂತರ ಠಾಣೆ ಮೊನಂ:358/2017 ರ ಎಫ್ಐಆರ್ ನಕಲು ಪ್ರತಿ ಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಬಳ್ಳಾರಿ ಗ್ರಾಮಾಂತರ ಪೋಲೀಸ್ ಠಾಣೆ ಕ್ರೈಂ ನಂಃ 348-2017 ರ ಎಫ್ ಐ ಆರ್ ಮತ್ತು ದೂರಿನ ಪ್ರತಿಗಳನ್ನು ಒಟ್ಟಾಗಿ ನಿಪಿ-20 ಎಂದು ಗುರುತಿಸಲಾಯಿತು.

ಅದೇ ದಿನ ಪಿರ್ಯಾದುದಾರರು ತಮ್ಮ ಮನೆಯನ್ನು ಬಾಡಿಗೆಗೆ ನೀಡಿದ ಬಗ್ಗೆ ಮಾಡಿಕೊಂಡ ಕರಾರು ಪತ್ರ 2017 ಮತ್ತು 2018 ರ ನಕಲು ಪತ್ರಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 15-4-2017 ಮತ್ತು ದಿಃ 1-8-2018 ರ ಮನೆ ಕರಾರು ಪತ್ರಗಳ ಕಾಪಿಗಳನ್ನು ನಿಪಿ-21 ಮತ್ತು ನಿಪಿ-22 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-21(ಎ) ಮತ್ತು ನಿಪಿ-22(ಎ) ಎಂದು ಗುರುತಿಸಲಾಯಿತು.

ದಿನಾಂಕ:14.08.2018 ರಂದು ಚಾಸಾ-16 ಅಗ್ಗಿ ರಾಮುಡು, ಚಾಸಾ-18 ಕೊರಚರ ಮಾರೇಶ, ಚಾಸಾ-19 ಎಮ್ಮಿಗನೂರು ಭಾಷಾ @ ಮೆಹಬೂಬ್ ಬಾಷಾ, ಚಾಸಾ-21 ಜಾಕೀರ್ ಹುಸೇನ್, ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಅದೇ ದಿನ ಪಿರ್ಯಾದುದಾರರಿಗೆ ಪೊಲೀಸ್ ಇಲಾಖೆ ಸೇರಿದಾಗಿನಿಂದ ಇಲ್ಲಿಯವರೆಗೆ ನೀಡಿರುವ ರಿವಾರ್ಡ್ ಮತ್ತು ಅವಾರ್ಡ್ ಗಳ ಬಗ್ಗೆ ಎಸ್ ಪಿ ಕಛೇರಿಯಿಂದ ಮಾಹಿತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಪತ್ರವನ್ನು ನಿಪಿ-23 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪಿರ್ಯಾದುದಾರರ ಕರ್ತವ್ಯ ನಿರ್ವಹಣೆ ಬಗ್ಗೆ ಅವರ ಕರ್ತವ್ಯ ಧೃಡೀಕರಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಕರ್ತವ್ಯ ದೃಢೀಕರಣ ಪತ್ರವನ್ನು ನಿಪಿ-24 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

ಆರೋಪಿಗೆ ಜಾಗೃತಿ ಕಿರಣ ಪತ್ರಿಕೆ ನಡೆಸಲು ಸರಕಾರದಿಂದ ನೀಡಿದ ಪರವಾನಿಗಿ ಪತ್ರವನ್ನು ಪಡೆದುಕೊಂಡಿದ್ದು ಅದನ್ನು ನಿಪಿ-25 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

ದಿನಾಂಕ:16.08.2018 ರಂದು ತನಿಖೆಯು ಪೂರ್ತಿಗೊಂಡಿದ್ದು ಆರೋಪಿತನ ವಿರುದ್ಧ ಆರೋಪ ಧೃಡಪಟ್ಟಿದ್ದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ಆರೋಪಿಯನ್ನು ವಿ ಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಎಂ ಜಿ ವಕೀಲರಿಂದಃ</u>

ನಾನು ಕೃತ್ಯ ಸ್ಥಳಕ್ಕೆ ಭೇಟಿ ನೀಡಿದ್ದೆ ಎಂದು ಹಾಗೂ ದಿಃ 9-1-2018 ರಂದು ನಿಪಿ-3 ರಂತೆ ಕೃತ್ಯಸ್ಥಳ ಪಂಚನಾಮೆಯನ್ನು ಮಾಡಿದ್ದೆ ಎಂದು ಮತ್ತು

ನಿಪಿ-1 ಪತ್ರಿಕೆಯನ್ನು ಜಪ್ತು ಮಾಡಿಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಚ್ಚಾ ನಕಾಶೆಯನ್ನು ತಯಾರಿಸಿದ್ದ ಎಂದು ಮತ್ತು ಪೋಟೋಗಳನ್ನು ತೆಗೆಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಯನ್ನು, ನಕಾಶೆಯನ್ನು ಮತ್ತು ಪೋಟೋಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸಾಕ್ಷಿದಾರರುಗಳು ನನ್ನ ಮುಂದೆ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ಸಾಕ್ಷಿದಾರರುಗಳ ಹೇಳಿಕೆಗಳನ್ನು ಮತ್ತು ದಾಖಲಾತಿಗಳನ್ನು ಠಾಣೆಯಲ್ಲಿಯೇ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಾನು ಹೇಳಿದಂತೆ ನನ್ನ ಮುಂದೆ ಯಾವುದೇ ಸ್ವಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅದನ್ನು ನಾನು ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.ನಾನು ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳೊಂದಿಗೆ ಮತ್ತು ಇತರೇ ಸಾಕ್ಷಿದಾರರೊಂದಿಗೆ ಸೇರಿಕೊಂಡು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಅವರುಗಳಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಎಲ್ಲಾ ದಾಖಲಾತಿಗಳನ್ನು ಸುಳ್ಳು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ತನಿಖೆಯ ಸಮಯದಲ್ಲಿ ಆರೋಪಿತನು ಯಾವುದೇ ತಪ್ಪು ಮಾಡಿಲ್ಲ ಎಂದು ಕಂಡು ಬಂದರೂ ಸಹ ಫಿರ್ಯಾದುದಾರರ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನಿಪಿ-1 ಪತ್ರಿಕೆಯಲ್ಲಿ ಫಿರ್ಯಾದುದಾರರ ವಿರುದ್ದ ಯಾವುದೇ ಜಾತಿನಿಂದನೆಯನ್ನು ಮಾಡಿಲ್ಲ ಮತ್ತು ಜಾತಿನಿಂದನೆ ಪದಗಳನ್ನು ಬಳಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಈ ಸಾಕ್ಷ್ಯವನ್ನು ವಿ.ಸಿ ಮೂಲಕ ರೆಕಾರ್ಡಿಂಗ್ ಮಾಡಲಾಗಿದ್ದು ಸಾಕ್ಷಿದಾರರು ಹೇಳಿದಂತೆ ಯತಾವತ್ತಾಗಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು. ಶ್ರೀ ಹರ್ಷ**,** ಸಿ ಪಿ ಸಿ**–2041** ರವರು ಟೆಕ್ನಿಷಿಯನ್ ಆಗಿ ಸಾಕ್ಷಿಯ ಪಾಯಿಂಟ್‌ನಲ್ಲಿದ್ದು ಶ್ರೀಮತಿ ನಾಗಶ್ರೀ ರವರು ಟೆಕ್ನಿಷಿಯನ್ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ).

ಓ.ಹೇ.ಕೆ. ಸರಿ ಇದೆ.

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಲಯ, ಬಳ್ಳಾರಿ.